ಪಿ ಡಬ್ಲ್ಯೂ ಃ **1 -**

ಸಾಕ್ಷಿಗೆ ದಿನಾಂಕಃ **28.04.2026** ರಂದು ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟೀ ಸವಾಲು**:** ಪ್ರತಿವಾದಿಗಳ ಪರ**:** ಶ್ರೀ**.** ಎಸ್**.**ವಿ**.**ಎಸ್**.** ವಕೀಲರ ಮೂಲಕ ಃ

ಈ ದಾವೆಯನ್ನು ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ತಯಾರು ಮಾಡಲು ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಅದರಲ್ಲಿರುವ ವಿಚಾರಗಳನ್ನು ನಾನು ತಿಳಿದುಕೊಂಡಿರುತ್ತೇನೆ. ಪ್ರತಿವಾದಿಗಳು ಸಲ್ಲಿಸಿರುವ ಪ್ರತಿವಾದ ಪತ್ರದ ಬಗ್ಗೆ ತಿಳಿದುಕೊಂಡಿರುತ್ತೇನೆ. ಮಾಗನೂರು ಗ್ರಾಮವು ಮಳವಳ್ಳಿಯಿಂದ ಸುಮಾರು ಒಂದರಿಂದ ಒಂದುವರೆ ಕಿ.ಮೀ. ದೂರದಲ್ಲಿದೆ ಎಂದರೆ ಸರಿ. ಮಾಗನೂರು ಮೂಲಕ ಮಂಡ್ಯಕ್ಕೆ ಹೋಗಬಹುದು ಎಂದರೆ ಸರಿ. ದಾವಾ ಸ್ವತ್ತುಗಳ ಸರ್ವೆ ನಂಬರ್ ನನಗೆ ಗೊತ್ತಿರುವುದಿಲ್ಲ. ಎಷ್ಟು ಸರ್ವೆ ನಂಬರ್‌ಗಳಿಗೆ ಸಂಬಂಧಿಸಿದಂತೆ ದಾವೆ ಸಲ್ಲಿಸಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಪತಿಯು ಕಾಯಿ ಮತ್ತು ಕೊಬ್ಬರಿ ವ್ಯಾಪಾರ ಮಾಡುತ್ತಾರೆ. ನಾನು ಗೃಹಿಣಿಯಾಗಿರುತ್ತೇನೆ. ನನಗೆ ಯಾವುದೇ ಆದಾಯದ ಮೂಲ ಇಲ್ಲ ಎಂದರೆ ಸರಿಯಲ್ಲ. ನನ್ನ ಪತಿಯು ಲೇವಾದೇವಿ ವ್ಯವಹಾರ ಮಾಡುತ್ತಾರೆ ಎಂದರೆ ಸರಿಯಲ್ಲ.

2. ನಿಪಿ 1 ರ ಪ್ರಮಾಣಿತ ಸಾಕ್ಷಿದಾರರು ನನ್ನ ಪತಿಯ ಸ್ನೇಹಿತರು ಎಂದರೆ ಸರಿ. ಉಪನೊಂದಣಾಧಿಕಾರಿಗಳ ಕಛೇರಿಯಿಂದ ಪತ್ರ ಬರಹಗಾರರ ಕಛೇರಿಗೆ ತುಂಬಾ ದೂರು ಇರುವುದಿಲ್ಲ, ಆದರೆ ಎಷ್ಟು ದೂರು ಆಗುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ 1 ನ್ನು ತಯಾರು ಮಾಡುವ ಕಾಲಕ್ಕೆ ನಾನು, ನನ್ನ ಪತಿ, ಪ್ರತಿವಾದಿಗಳು ಮತ್ತು ಸಾಕ್ಷಿದಾರರು ಇದ್ದೆವು. ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದಾಗಿರುತ್ತದೆ. ಸದರಿ ದಾಖಲೆಯು ದಿ: 14.12.2015 ರ ಕ್ರಯದ ಕರಾರು ಪತ್ರದ ಜೆರಾಕ್ಸ್ ಪ್ರತಿಯಾಗಿದ್ದು, ಸಹಿಯನ್ನು ಒಪ್ಪಿಕೊಂಡ ಕಾರಣ ಕೇವಲ ಸಹಿಯ ಉದ್ದೇಶದಿಂದ ಸದರಿ ದಾಖಲೆಯನ್ನು ನಿಡಿ 1 ಎಂದು ಗುರುತಿಸಲಾಯಿತು. ನಿಡಿ 1 ದಾಖಲೆಯು ನನ್ನ ಮತ್ತು ಪ್ರತಿವಾದಿಗಳ ನಡುವೆ ಆದ ದಾಖಲೆಯಾಗಿರುತ್ತದೆ. ಸದರಿ ದಾಖಲೆಯ ಬಗ್ಗೆ ನನ್ನ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿರುವ ಸಹಿ ನನ್ನದಾಗಿರುತ್ತದೆ. ಸದರಿ ದಾಖಲೆಯು ದಿ: 22.03.2017 ರ ಕ್ರಯದ ಕರಾರು ಪತ್ರದ ಜೆರಾಕ್ಸ್ ಪ್ರತಿಯಾಗಿದ್ದು, ಸಹಿಯನ್ನು ಒಪ್ಪಿಕೊಂಡ ಕಾರಣ ಕೇವಲ ಸಹಿಯ ಉದ್ದೇಶದಿಂದ ಸದರಿ ದಾಖಲೆಯನ್ನು ನಿಡಿ 2 ಎಂದು ಗುರುತಿಸಲಾಯಿತು. ನಿಡಿ 2 ದಾಖಲೆಯು ಸಹ ನನ್ನ ಮತ್ತು ಪ್ರತಿವಾದಿಗಳ ನಡುವೆ ಆದ ದಾಖಲೆಯಾಗಿರುತ್ತದೆ. ಸದರಿ ದಾಖಲೆಯ ಬಗ್ಗೆ ನನ್ನ ವಕೀಲರಿಗೆ ಮಾಹಿತಿ ನೀಡಿರುತ್ತೇನೆ.

3. ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿರುವ ಸಹಿ ನನ್ನದಾಗಿರುತ್ತದೆ. ಸದರಿ ದಾಖಲೆಯು ದಿ: 12.03.2021 ರ ಕ್ರಯದ ಕರಾರಿನ ರದ್ದಿಯಾತಿ ಪತ್ರದ ಡಿಜಿಟಲ್ ಪ್ರತಿಯಾಗಿದ್ದು, ಸಹಿಯನ್ನು ಒಪ್ಪಿಕೊಂಡ ಕಾರಣ ಕೇವಲ ಸಹಿಯ ಉದ್ದೇಶದಿಂದ ಸದರಿ ದಾಖಲೆಯನ್ನು ನಿಡಿ 3 ಎಂದು ಗುರುತಿಸಲಾಯಿತು. ಸದರಿ ದಾಖಲೆಯ ಬಗ್ಗೆ ನನ್ನ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ನಿಡಿ 1 ರಿಂದ 3 ದಾಖಲೆಗಳ ಬಗ್ಗೆ ನನ್ನ ನೋಟೀಸ್‌ನಲ್ಲಿ, ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಲು ನನಗೆ ತೊಂದರೆ ಇರಲಿಲ್ಲ. ನಿಡಿ 1 ದಾಖಲೆಯು ಆಸ್ತಿಯನ್ನು ಖರೀದಿ ಮಾಡುವ ಉದ್ದೇಶದಿಂದ ಆಗಿದ್ದು, ಆರ್.ಟಿ.ಸಿ.ಗಳು ಮತ್ತು ಚೆಕ್‌ಬಂದಿ ಸರಿ ಇಲ್ಲದ ಕಾರಣ ಮುಂದೂಡುತ್ತಾ ಬಂದಿರುತ್ತದೆ. ನಿಡಿ 1 ರ ದಾಖಲೆಯು ಮಾರಾಟದ ಉದ್ದೇಶದಿಂದ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 1 ರ ವ್ಯವಹಾರದ ಮಾತುಕತೆಗೆ ನನ್ನ ಪತಿಯ ಸ್ನೇಹಿತರಾದ ಮಹದೇವ ಮತ್ತು ನಾನು, ನನ್ನ ಪತಿ ಸೇರಿದ್ದೆವು. 2,45,000 ರೂಪಾಯಿಗಳನ್ನು ಪ್ರತಿವಾದಿಗಳು ನನ್ನ ಮತ್ತು ನನ್ನ ಪತಿಯಿಂದ ಸಾಲವಾಗಿ ಪಡೆದಿದ್ದರು ಎಂದರೆ ಸರಿಯಲ್ಲ. ಸಾಲದ ತೀರುವಳಿಯ ಭದ್ರತೆಗಾಗಿ ನಿಡಿ 1 ನ್ನು ಮಾಡಲಾಗಿತ್ತು ಎಂದರೆ ಸರಿಯಲ್ಲ. 2,45,000/- ರೂಪಾಯಿಗಳನ್ನು ಪ್ರತಿವಾದಿಗಳು ನನಗೆ ವಾಪಸ್ ನೀಡಿರುವುದಿಲ್ಲ. ದಿ: 22.03.2017 ರಲ್ಲಿ ಅಸಲು ಮತ್ತು ಬಡ್ಡಿಯ ಹಣಕ್ಕಾಗಿ ನಿಡಿ 2 ದಾಖಲೆಯನ್ನು ಮಾಡಲಾಗಿದೆ ಎಂದರೆ ಸರಿಯಲ್ಲ. ನಿಡಿ 1 ರ 2,45,000 ರೂಪಾಯಿ ಮೊತ್ತಕ್ಕೆ ಬಡ್ಡಿಯನ್ನು ಸೇರಿಸಿ, ನಿಡಿ 2 ರಂತೆ ಮತ್ತೊಂದು ದಾಖಲೆಯನ್ನು ಮಾಡಲಾಗಿದೆ ಎಂದರೆ ಸರಿಯಲ್ಲ. ದಿ: 22.03.2017 ರಂದು ಪ್ರತಿವಾದಿಗಳಿಗೆ ನಾವು ಹಣವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಿ: 22.03.2017 ರಲ್ಲಿ ನಾವು ಪ್ರತಿವಾದಿಗಳಿಗೆ ಹಣ ನೀಡಿರುತ್ತೇವೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ, ಆದರೆ ನಿಡಿ 2 ರಲ್ಲಿ ಆ ಬಗ್ಗೆ ನಮೂದು ಇರುತ್ತದೆ. ನಿಡಿ 1 ಮತ್ತು 2 ದಾಖಲೆಗಳನ್ನು ನನ್ನ ಪತಿಯು ತಯಾರು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನಿಡಿ 1 ಮತ್ತು 2 ನ್ನು ಬರೆಯಲು ಮಾಹಿತಿಯನ್ನು ನನ್ನ ಪತಿ ನೀಡಿರುತ್ತಾರೆ ಎಂದರೆ ನಾನು ಮತ್ತು ನನ್ನ ಪತಿ ನೀಡಿರುತ್ತೇವೆ. ನಿಡಿ 2 ರ ಪ್ರಕಾರ 3,75,000/- ರೂಪಾಯಿಗಳನ್ನು ಪ್ರತಿವಾದಿಗಳು ನನಗೆ ವಾಪಸ್ ನೀಡಿಲ್ಲ ಎಂದರೆ ಸರಿ. 3,75,000/- ರೂಪಾಯಿ ಮತ್ತು ಅದಕ್ಕೆ ತಗಲುವ ಬಡ್ಡಿಯನ್ನು ಸೇರಿಸಿ ನಿಡಿ 3 ರಂತೆ ಸಾಲದ ಭದ್ರತೆಗಾಗಿ ಪತ್ರವನ್ನು ಬರೆಸಲಾಗಿದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನಗೆ ಮತ್ತು ನನ್ನ ಪತಿಗೆ ಸ್ವಲ್ಪ ಸ್ವಲ್ಪ ಬಡ್ಡಿಯ ಮೊತ್ತವನ್ನು ಆಗಾಗ್ಗೆ ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

4. ನಿಡಿ 1 ರಲ್ಲಿ ಚೆಕ್ಕುಬಂದಿ ಏನು ಬದಲಾವಣೆಯಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ದಿ: 12.03.2021 ರಂದು ಪ್ರತಿವಾದಿಗಳಿಗೆ 4 ಲಕ್ಷ ರೂಪಾಯಿಗಳನ್ನು ಪಾವತಿ ಮಾಡಿದ್ದ ಬಗ್ಗೆ ದಾಖಲೆ ಇರುವುದಿಲ್ಲ, ಆದರೆ ನಿಡಿ 3 ರಲ್ಲಿ

ನಮೂದು ಮಾಡಲಾಗಿದೆ. ನಿಡಿ 2 ಮತ್ತು 3 ರಲ್ಲಿ ಪ್ರತಿವಾದಿಗಳಿಗೆ ಹಣ ಕೊಡಲಾಗಿದೆ ಎಂದು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಹಣವನ್ನು ಡಿ.ಡಿ ಅಥವಾ ಚೆಕ್ ಮೂಲಕ ಕೊಡಲು ತೊಂದರೆ ಇತ್ತೇ ಎಂದರೆ ನನಗೆ ತಿಳುವಳಿಕೆ ಇಲ್ಲದ ಕಾರಣ ಆ ರೀತಿ ಪಾವತಿ ಮಾಡಿರುವುದಿಲ್ಲ. ನಿಡಿ 2 ಮತ್ತು ನಿಪಿ 1 ರಲ್ಲಿ ನಮೂದು ಮಾಡಿರುವಂತೆ ಪ್ರತಿವಾದಿಗಳಿಗೆ ನಾವು ಹಣವನ್ನು ಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ.

5. 1 ನೇ ಪ್ರತಿವಾದಿಗಳಿಗೆ 3 ನೇ ಪ್ರತಿವಾದಿ ಮಾತ್ರ ಮಗ ಇರುತ್ತಾರೆ. ದಾವಾ ಸ್ವತ್ತನ್ನು ನಾನು ಖುದ್ದಾಗಿ ನೋಡಿರುತ್ತೇನೆ. ದಾವಾ ಸ್ವತ್ತುಗಳಲ್ಲಿ ಯಾವುದೇ ಮರಗಳು ಇರುವುದಿಲ್ಲ. ಮಾಗನೂರು ಮುಖ್ಯ ರಸ್ತೆಯಿಂದ ಹತ್ತಿರದಲ್ಲಿ ದಾವಾ ಸ್ವತ್ತು ಇರುತ್ತದೆ. 2015 ರಲ್ಲಿ ಒಂದು ಗುಂಟೆಗೆ ದಾವಾ ಸ್ವತ್ತಿನ ಬೆಲೆ 3 ಲಕ್ಷಕ್ಕೂ ಹೆಚ್ಚು ಇತ್ತು ಎಂದರೆ ಸರಿಯಲ್ಲ. 2021 ರಲ್ಲಿ ಒಂದು ಗುಂಟೆಗೆ ದಾವಾ ಸ್ವತ್ತಿನ ಬೆಲೆ 7 ಲಕ್ಷಕ್ಕೂ ಹೆಚ್ಚು ಇತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಅರಳಿಮರ ಮತ್ತು ಬೇವಿನ ಮರಗಳು ಇರುತ್ತವೆಎಂದರೆ ಸರಿ. ಸಾಕ್ಷಿಯು ಮುಂದುವರೆದು ಮರಗಳು ಇರುವುದಿಲ್ಲವೆಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿಯ ತಂದೆ ಮತ್ತು ಅವರ ತಾಯಿ ಮತ್ತು ಪೂರ್ವಜರನ್ನು ದಾವಾ ಸ್ವತ್ತುಗಳಲ್ಲಿ ಅಂತ್ಯಸಂಸ್ಕಾರ ಮಾಡಲಾಗಿದೆ ಎಂದರೆ ಸರಿಯಲ್ಲ. ನಾನು ಸದರಿಯವರ ಕುಟುಂಬದವರ ಅಂತ್ಯ ಸಂಸ್ಕಾರದಲ್ಲಿ ಭಾಗವಹಿಸಿರಲಿಲ್ಲ. ಸದರಿಯವರ ಕುಟುಂಬದವರ ಅಂತ್ಯಸಂಸ್ಕಾರವನ್ನು ದಾವಾ ಸ್ವತ್ತಿನಲ್ಲಿ ಮಾಡಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಿತೃ ಪಕ್ಷದ ಸಮಯದಲ್ಲಿ ಮತ್ತು ಹಬ್ಬಹರಿದಿನಗಳಲ್ಲಿ ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಪೂಜೆ ಮಾಡುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರಗಳು ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಎಸ್.ಬಿ.ಐ. ಬ್ಯಾಂಕ್‌ನಲ್ಲಿ ಸುಮಾರು 20 ವರ್ಷಗಳಿಂದ ನಾನು ಬ್ಯಾಂಕ್ ಖಾತೆಯನ್ನು ಹೊಂದಿರುತ್ತೇನೆ. ಬ್ಯಾಂಕ್‌ನ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿರುತ್ತದೆ. ನಾನು ಚೆಕ್ ಪುಸ್ತಕವನ್ನು ಹೊಂದಿರುತ್ತೇನೆ ಎಂದರೆ ಸರಿ. ನಾನು ಹಲವು ಜನರಿಗೆ ಚೆಕ್ ಮೂಲಕ ಹಣವನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಬ್ಯಾಂಕ್ ಖಾತೆಯ ವಿವರಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. 1 ಮತ್ತು 2 ನೇ ಪ್ರತಿವಾದಿಗಳು ಏನು ವೃತ್ತಿ ಮಾಡುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. 1 ನೇ ಪ್ರತಿವಾದಿಗೆ ದಾವಾ ಸ್ವತ್ತುಗಳನ್ನು ಹೊರತುಪಡಿಸಿ ಬೇರೆ ಸ್ವತ್ತುಗಳು ಇಲ್ಲ ಎಂದರೆ ಸರಿಯಲ್ಲ. ಆ ರೀತಿ ಬೇರೆ ಆಸ್ತಿ ಇರುವ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ, ಆದರೆ ನಿಪಿ 1 ರ ಚೆಕ್ ಬಂದಿಯಲ್ಲಿ ನಮೂದು ಇರುತ್ತದೆ. ಚೆಕ್ಕುಬಂದಿಯನ್ನು ಬರೆಸುವ ಪೂರ್ವದಲ್ಲಿ ನಾನು ಸ್ಥಳಕ್ಕೆ ಹೋಗಿ ಅವರಿಗೆ ಸೇರಿದ ಸ್ವತ್ತನ್ನು ನೋಡಿರುತ್ತೇನೆ. ಆ ರೀತಿ 1 ನೇ ಪ್ರತಿವಾದಿಗೆ ಸೇರಿದಂತೆ ಬೇರೆ ಸ್ವತ್ತು ಇಲ್ಲದೇ ಇದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. 3 ನೇ ಪ್ರತಿವಾದಿಯು 10-12 ವರ್ಷಗಳಿಂದ ಬೆಂಗಳೂರಿನಲ್ಲಿಯೇ ಇರುತ್ತಾರೆ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಗಳು ಮತ್ತು 3 ನೇ ಪ್ರತಿವಾದಿಯ ನಡುವೆ ಹಲವು ವರ್ಷಗಳಿಂದ ಸಂಪರ್ಕ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ತನ್ನ ಜೀವನ ನಿರ್ವಹಣೆಗಾಗಿ ವ್ಯವಸಾಯ ವೃತ್ತಿಯನ್ನು ಮಾಡುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು 1 ಮತ್ತು 2 ನೇ ಪ್ರತಿವಾದಿಗಳ ಜೀವನ ನಿರ್ವಹಣೆಗೆ ಮತ್ತು ಧಾರ್ಮಿಕ ಕಾರ್ಯಕ್ಕೆ ಅವಶ್ಯಕವಾಗಿದೆ ಎಂದರೆ ಸರಿಯಲ್ಲ. ಸಾಲದ ತೀರುವಳಿಯ ಭದ್ರತೆಗಾಗಿ 2015 ರಲ್ಲಿ ದಾಖಲೆಯನ್ನು ಬರೆಸಿಕೊಂಡು, ಅದರ ಅಸಲು ಮತ್ತು ಬಡ್ಡಿಗಾಗಿ ನಂತರದ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. 2015 ರ ನಂತರ ಪ್ರತಿವಾದಿಗಳಿಗೆ ನಾನು ಯಾವುದೇ ಮೊತ್ತವನ್ನು ನೀಡಿಲ್ಲ ಎಂದರೆ ಸರಿಯಲ್ಲ.

8. ಶುದ್ಧಕ್ರಯ ಪತ್ರವನ್ನು ಬರೆದುಕೊಡುವಂತೆ ನಾನು ಪ್ರತಿವಾದಿಗಳನ್ನು ಹಲವು ಬಾರಿ ಕೇಳಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳು ಅನಕ್ಷರಸ್ಥರು ಆದ ಕಾರಣ ಅವರು ನೋಟೀಸ್‌ಗೆ ಉತ್ತರ ನೀಡಿಲ್ಲ ಎಂದರೆ ಅವರು ವಿದ್ಯಾವಂತರು ಆಗಿರುತ್ತಾರೆ. 1 ಮತ್ತು 2 ನೇ ಪ್ರತಿವಾದಿಗಳು ವಿದ್ಯಾಭ್ಯಾಸ ಮಾಡಿಲ್ಲ ಎಂದರೆ ಸರಿಯಲ್ಲ. ಸಾಧ್ಯವಾದರೆ ಬೆಲೆ ಬಾಳುವ ಆಸ್ತಿಗಳನ್ನು ಲಪಟಾಯಿಸಲು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಅಸಲು ಮತ್ತು ಬಡ್ಡಿಯನ್ನು ಪಾವತಿ ಮಾಡಲು ಸಿದ್ಧರಿದ್ದರೂ ಸಹ ದಾವಾ ಸ್ವತ್ತುಗಳನ್ನು ಲಪಟಾಯಿಸಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿ: 12.03.2021 ರಂದು 3,75,000/- ರೂಪಾಯಿಗಳನ್ನು 1 ನೇ ಪ್ರತಿವಾದಿಗೆ ಪಾವತಿ ಮಾಡದೇ ಇದ್ದರೂ ಸಹ ನಿಡಿ 3 ನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಮಳವಳ್ಳಿ.